Advt.



# ಮಹಿಳೆಯರ ಆರೋಗ್ಯ ಸಮಸ್ಯೆಗಳಿಗೆ ಆಯುರ್ವೇದ ಪರಿಹಾರ.

ಮಹಿಳೆಯರು ಹತ್ತು ಹಲವು ಆರೋಗ್ಯ ಸಮಸ್ಯೆಗಳನ್ನು ಎರಡು ವಿಭಾಗಗಳಲ್ಲಿ ವಿಂಗಡಿಸಬಹುದು. ಅವುಗಳೆಂದರೆ ಸ್ತ್ರೀ ರೋಗಗಳು ಮತ್ತು ಪ್ರಸೂತಿ ರೋಗಗಳು.

## ಸ್ತ್ರೀ ರೋಗಗಳು:

ಹುಡುಗಿಯರಿಗೆ ಋತುಸ್ರಾವ ಆರಂಭವಾದಾಗಿನಿಂದ ಹಿಡಿದು ಗರ್ಭಾವಸ್ಥೆಯ ತನಕ ಈ ಸಮಸ್ಯೆಗಳು ಹಂತ ಹಂತವಾಗಿ ಪ್ರತ್ಯಕ್ಷವಾಗುತ್ತ ಹೋಗುತ್ತವೆ. ಅವುಗಳಲ್ಲಿ ಕಾಣಿಸಿಕೊಳ್ಳುವ ಕೆಲವು ಪ್ರಮುಖ ರೋಗಗಳ ಲಕ್ಷಣಗಳು ಹಾಗೂ ಆಯುರ್ವೇದದಲ್ಲಿ ಅನುಸರಿಸಲಾಗುವ ಚಿಕಿತ್ಸೆಗಳ ಬಗೆಗೆ ಅಷ್ಟಿಷ್ಟು ತಿಳಿದುಕೊಳ್ಳುವುದು ಅಗತ್ಯ.

## ಮುಟ್ಟಿನ ಅವಧಿಯ ನೋವುಗಳು:

ಇದನ್ನು 'ಡಿಸ್‌ಮೆನೊರಿಯಾ' ಎಂದು ಹೇಳಲಾಗುತ್ತದೆ. ಯೋನಿದ್ವಾರ ಕಿರಿದಾಗಿರುವುದು ಜೀವನಶೈಲಿಯ ಕಾರಣದಿಂದ ಪಚನಕ್ರಿಯೆ ಏರುಪೇರಾಗಿರುವುದು, ರಕ್ತಹೀನತೆ, ಮಲಬದ್ಧತೆ ಇವೆಲ್ಲವುಗಳಿಂದ ಮುಟ್ಟಿನ ನೋವು ಕಾಡುತ್ತಿರುತ್ತದೆ. ಆಗ ಯುವತಿಯರು ನೋವು ನಿವಾರಕಗಳನ್ನು ಸೇವಿಸಿ ತಾತ್ಕಾಲಿಕವಾಗಿ ನೋವು ನಿವಾರಿಸಿಕೊಳ್ಳಲು ಪ್ರಯತ್ನಿಸುತ್ತಾರೆ.

ಅರ್ಥ್ ಮಲ್ಟಿಸ್ಪೆಶಾಲಿಟಿ ಆಯುರ್ವೇದ ಹಾಸ್ಪಿಟಲ್‌ನಲ್ಲಿ ಕೇರಳೀಯ ಹಾಗೂ ಪಂಚಕರ್ಮ ಚಿಕಿತ್ಸೆಯ ಮೂಲಕ ಸೂಕ್ತ ಚಿಕಿತ್ಸೆ ನೀಡಲಾಗುತ್ತದೆ. ಇಲ್ಲಿ ಋತುಚಕ್ರ ಬಂದುಹೋದ 6–7 ದಿನಗಳ ಬಳಿಕ ಚಿಕಿತ್ಸೆ ಶುರುಮಾಡಲಾಗುತ್ತದೆ. ಇದರಿಂದ ಮುಟ್ಟಿನ ನೋವು 2–3 ಋತುಚಕ್ರಗಳಲ್ಲಿಯೇ ಸರಿಹೋಗುತ್ತದೆ.

## ಪಿ.ಸಿ.ಓ.ಡಿ ಸಮಸ್ಯೆ:

ಇದರ ಮುಖ್ಯ ಲಕ್ಷಣಗಳೆಂದರೆ, ಅನಿಯಮಿತ ಋತುಸ್ರಾವ, ಹಾರ್ಮೋನುಗಳ ಏರುಪೇರಿನಿಂದಾಗಿ ದೇಹತೂಕ ಗಣನೀಯವಾಗಿ ಹೆಚ್ಚಾಗುವಿಕೆ, ಮುಖದಲ್ಲಿ ಹಾಗೂ ದೇಹದ ಇತರೆ ಭಾಗದಲ್ಲಿ ಕೂದಲುಗಳು ಕಾಣಿಸಿಕೊಳ್ಳುವಿಕೆ, ಮೊಡವೆ ಗುಳ್ಳೆಗಳು ಏಳುವವು. ಆಹಾರ ವಿಹಾರದ ಕ್ರಮಗಳು, ಮಾನಸಿಕ ಸಮಸ್ಯೆಗಳು ಈ ರೋಗ ಉಲ್ಬಣವಾಗಲು ಪ್ರಮುಖ ಕಾರಣ. ಇದು ಬಂಜೆತನಕ್ಕೆ ಶೇ–50ರಷ್ಟು ಕಾರಣವಾಗುತ್ತದೆ. ಜೀರ್ಣಪ್ರಕ್ರಿಯೆ ಸುಧಾರಣೆ ಮಾಡುವುದು ಶೋಧನ ಕಾರ್ಯದ ಮೂಲಕ ವಾತ–ಪಿತ್ತ ಕಫದ ಸಮತೋಲನ ಮಾಡುವುದರ ಮೂಲಕ ಅರ್ಥ್ ಮಲ್ಟಿ ಸ್ಪೆಷಾಲಿಟಿ ಆಯುರ್ವೇದ ಆಸ್ಪತ್ರೆಯಲ್ಲಿ ಆಪರೇಷನ್ ಇಲ್ಲದೆಯೇ ಚಿಕಿತ್ಸೆ ನೀಡಲಾಗುತ್ತದೆ. 3–4 ತಿಂಗಳುಗಳಲ್ಲಿಯೇ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದಾಗಿದೆ.

## ಫೈಬ್ರಾಯ್ಡ್ ಗಂಟು:

ಗರ್ಭಕೋಶದ ಒಳಭಾಗದಲ್ಲಿ ಗಂಟುಗಳು ಕಾಣಿಸಿಕೊಂಡು ಆರೋಗ್ಯವನ್ನು ಏರುಪೇರು ಮಾಡುತ್ತದೆ. ಇದು ಬಂಜೆತನಕ್ಕೂ ಕಾರಣವಾಗುವಂತಹ ಸಮಸ್ಯೆಯಾಗಿದೆ. ಇದರ ಪ್ರಮುಖ ಲಕ್ಷಣಗಳೆಂದರೆ ಅತಿಯಾದ ರಕ್ತಸ್ರಾವವಾಗುತ್ತದೆ. ಒಂದು ಋತುಚಕ್ರದ ಅವದಿಯಲ್ಲಿ 15–20 ದಿನಗಳ ಕಾಲ ಬಿಟ್ಟು ಬಿಟ್ಟು ರಕ್ತಸ್ರಾವ ಆಗುತ್ತಿರುತ್ತದೆ. ನಿರಂತರ ಹೊಟ್ಟೆನೋವು ಕಾಣಿಸಿಕೊಳ್ಳುತ್ತದೆ. ಔಷಧಿಗಳ ಮೂಲಕ, ಶೋಧನ ಚಿಕಿತ್ಸೆಯ ಮೂಲಕ ಇದಕ್ಕೆ ಚಿಕಿತ್ಸೆ ನೀಡಲಾಗುತ್ತದೆ.

## ಎಂಡೊಮೆಟ್ರಿಯಾಸಿಸ್:

ಗರ್ಭಾಶಯದ ಗೋಡೆಯ ಪದರು ದಪ್ಪಗಾಗುತ್ತ ಒಳಪದರಿನ ಜತೆಗೆ ಹೊರಪದರಿನ ಪೊರೆ ಹೆಚ್ಚಾಗುತ್ತ ಹೋಗುತ್ತದೆ. ಈ ಸಮಸ್ಯೆ ಇದ್ದಾಗ ಮೂತ್ರ ಮಾಡುವಾಗ ಉರಿ ಅನಿಸುತ್ತದೆ. ಲೈಂಗಿಕ ಚಟುವಟಿಕೆ ನಡೆಸಲು ತೊಂದರೆಯಾಗುತ್ತದೆ. ಔಷದಿಗಳ ಮೂಲಕ ಸೋಂಕು ನಿವಾರಿಸಲಾಗುತ್ತದೆ. ಕಫ ಸಮತೋಲನದ ಚಿಕಿತ್ಸೆ ಕೂಡ ನೀಡಲಾಗುತ್ತದೆ. ಒಂದೂವರೆ ತಿಂಗಳಿನಲ್ಲಿಯೇ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದಾಗಿದೆ.

## ಪ್ರಸೂತಿ ರೋಗಗಳು:

ಗರ್ಭಾವಸ್ಥೆಗಿಂತ ಮುಂಚೆ, ಗರ್ಭಾವಸ್ಥೆ ಹಾಗೂ ಬಳಿಕದ ಸಮಸ್ಯೆಗಳನ್ನು ಬಗೆಹರಿಸಲಾಗುತ್ತದೆ. ಮಗುವಿಗಾಗಿ ಪರಿತಪಿಸುತ್ತಿರುವ ಮಹಿಳೆ ಹಾಗೂ ಪುರುಷರಿಗೆ ಕ್ರಮಬದ್ಧ ಚಿಕಿತ್ಸೆ ನೀಡಿ ಬಂಜೆತನದ ಸಮಸ್ಯೆ ನಿವಾರಿಸಲಾಗುತ್ತದೆ. ಇನ್ನು ಕೆಲವು ದಂಪತಿಗಳಿಗೆ ಆರೋಗ್ಯಕರ ಮಗು ಜನಿಸಬೇಕೆಂಬ ಅಪೇಕ್ಷೆ ಇರುತ್ತದೆ. ಮಧುಮೇಹ, ರಕ್ತದೊತ್ತಡ ಥೈರಾಯ್ಡ್‌ನಂತಹ ರೋಗಗಳು ಹುಟ್ಟುವ ಮಗುವಿನ ಮೇಲೆ ಯಾವುದೇ ಪರಿಣಾಮ ಉಂಟಾಗದಂತೆಯೂ ಅರ್ಥ್ ಹಾಸ್ಪಿಟಲ್‌ನಲ್ಲಿ ಚಿಕಿತ್ಸೆ ನೀಡಲಾಗುತ್ತದೆ. ತಂದೆ–ತಾಯಿಗಳಿಗೆ ಬೇರೆ ರೋಗವಿದ್ದು, ಅದು ತಮ್ಮ ಮಗುವಿಗೂ ಬರಬಹುದೆಂಬ ಆತಂಕ ಕಾಡುತ್ತಿರುತ್ತದೆ. ಗರ್ಭಾವಸ್ಥೆಯ ಬಗ್ಗೆ ಯೋಚನೆ ಮಾಡುತ್ತಿರುವ ದಂಪತಿಗಳಿಗೆ ಸೂಕ್ತ ಸಲಹೆ–ಸೂಚನೆ ನೀಡುವುದರ ಮೂಲಕ ಅವರು ಆರೋಗ್ಯವಂತ ತಂದೆ–ತಾಯಿಗಳಾಗುವುದು ಹೇಗೆ ಎಂದು ತಿಳಿಸಿಕೊಡಲಾಗುತ್ತದೆ. ಇದರ ಜತೆಜತೆಗೆ ಮಹಿಳೆಯರಿಗೆ ಸಹಜ ಹೆರಿಗೆ ಆಗುವ ಬಗ್ಗೆ ಅರ್ಥ್ ಹಾಸ್ಪಿಟಲ್‌ನಲ್ಲಿ ನೋಡಿಕೊಳ್ಳಲಾಗುತ್ತದೆ. ಹೆರಿಗೆಯ ಬಳಿಕ ತಾಯಿ–ಮಗುವಿಗೆ 40 ದಿನಗಳ ಸೂಕ್ತ ಪೋಷಣೆಯ ಅಗತ್ಯವಿರುತ್ತದೆ. ಹೆರಿಗೆಯ ಬಳಿಕ ಗರ್ಭಕೋಶ ಸ್ವಲ್ಪ ಮೇಲಕ್ಕೆ ಜರುಗಿ ಬೊಜ್ಜು ಸಹ ಕಾಣಿಸಿಕೊಳ್ಳಬಹುದು, ಮಹಿಳೆಯರಿಗೆ ಬೊಜ್ಜು ಕಾಣಿಸಿಕೊಳ್ಳದಂತೆಯು ಇಲ್ಲಿ ನಿಯಮಿತ ಚಿಕಿತ್ಸೆ ನೀಡಲಾಗುತ್ತದೆ.

**HEALING EARTH**
- *Multi-Speciality Ayurvedic IP Hospital*,
REDEFINING HEALING EXPERIENCE
Ph: 7899903943, 7899903944, 7899903945, 080-67475757
Prithvi Healthcare Pvt. Ltd.,
No.143/149, HSR Ring Road, 5th Sector,
Bangalore-560 034. E:info@healingearth.co.in,
W:www.healingearth.co.in